# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ

'ವಿಜ್ಞಾನ ಭವನ', ನಂ. 24/2 [illegible], ಬೆಂಗಳೂರು-560 070

ದೂರವಾಣಿ/ಫ್ಯಾಕ್ಸ್ 080-26711160, ಇ-ಮೇಲ್ : fellowship9999@gmail.com, ವೆಬ್‌ಸೈಟ್ : kstacademy.org

KSTA


ಕವಿತಂಅ/ಶಿಷ್ಯವೇತನ/ಎಸ್‌ಡಿಪಿ/2017-18 ದಿನಾಂಕ [illegible].08.2017

ಮಾನ್ಯರೇ,

ವಿಷಯ : 2017-18ನೇ ಸಾಲಿನ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ-ಎಸ್‌ಡಿಪಿ ಶಿಷ್ಯವೇತನಕ್ಕೆ ಅರ್ಜಿಗಳನ್ನು ಆಹ್ವಾನಿಸುತ್ತಿರುವ ಬಗ್ಗೆ.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು 2013-14ನೇ ಸಾಲಿನಿಂದ **ಡಾ. ಎಂ. ನಂಜುಂಡಪ್ಪ ವರದಿ ಆಧಾರಿತ ರಾಜ್ಯದ ಹಿಂದುಳಿದ ತಾಲ್ಲೂಕುಗಳ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿಜ್ಞಾನ ಪದವಿ ವಿದ್ಯಾರ್ಥಿಗಳಿಗೆ ವಿಶೇಷ ಅಭಿವೃದ್ಧಿ ಯೋಜನೆಯಡಿ** ತಲಾ ರೂ. 10,000/- ಗಳಂತೆ **ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ – ಎಸ್.ಡಿ.ಪಿ. ಶಿಷ್ಯವೇತನವನ್ನು** ನೀಡುತ್ತಿರುವುದು ಸರಿಯಷ್ಟೆ. ಅದರಂತೆ, 2017-18ನೇ **ಸಾಲಿನಲ್ಲಿಯೂ ಸಹ ವಿಶೇಷ ಅಭಿವೃದ್ಧಿ ಯೋಜನೆಯಡಿ ರಾಜ್ಯದ ಹಿಂದುಳಿದ ತಾಲ್ಲೂಕುಗಳ** ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಶಿಷ್ಯವೇತನಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗುತ್ತಿದೆ.

**ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಇರಬೇಕಾದ ಅರ್ಹತೆ ಹಾಗೂ ಸಲ್ಲಿಸಬೇಕಾದ ದಾಖಲೆಗಳ ವಿವರ ಈ ಕೆಳಕಂಡಂತಿದೆ :**

| | |
|---|---|
| ಪ್ರಥಮ ವರ್ಷದ ಬಿ.ಎಸ್ಸಿ. ಶಿಷ್ಯವೇತನಕ್ಕೆ ಅರ್ಜಿ ಸಲ್ಲಿಸಲು ಇರಬೇಕಾದ ಅರ್ಹತೆ ಹಾಗೂ ಸಲ್ಲಿಸಬೇಕಾದ ದಾಖಲೆಗಳು | ದ್ವಿತೀಯ ಪಿ.ಯು.ಸಿ. ವಿಜ್ಞಾನ ವಿಭಾಗದಲ್ಲಿ ಶೇಕಡ 70 ಕ್ಕಿಂತ ಹೆಚ್ಚು ಅಂಕ ಪಡೆದು, ಪ್ರಥಮ ಬಿ.ಎಸ್ಸಿಗೆ ಪ್ರವೇಶ ಪಡೆದಿರಬೇಕು (ಎರಡು ಮೂಲ ವಿಜ್ಞಾನ ವಿಷಯಗಳು ಕಡ್ಡಾಯ)<br>**ಸಲ್ಲಿಸಬೇಕಾದ ದಾಖಲೆಗಳು**<br>• ಪ್ರಾಂಶುಪಾಲರಿಂದ ದೃಢೀಕರಿಸಿದ ದ್ವಿತೀಯ ಪಿ.ಯು.ಸಿ. ವಿಜ್ಞಾನ ಅಂಕಪಟ್ಟಿ ಪ್ರತಿಗಳು<br>• ಕಾಲೇಜಿನ ಗುರುತಿನ ಚೀಟಿ ಪ್ರತಿ<br>• IFSC ಕೋಡ್ ವಿವರವುಳ್ಳ ಬ್ಯಾಂಕ್ ಖಾತೆಯ ಪಾಸ್ ಬುಕ್ ಪ್ರತಿ ಅಥವಾ IFSC ಕೋಡ್ ವಿವರವುಳ್ಳ ರದ್ದುಗೊಳಿಸಿದ ಚೆಕ್<br>• ಆಧಾರ್ ಕಾರ್ಡ್ ಪ್ರತಿ |
| ದ್ವಿತೀಯ ವರ್ಷದ ಬಿ.ಎಸ್ಸಿ. ಶಿಷ್ಯವೇತನಕ್ಕೆ ಅರ್ಜಿ ಸಲ್ಲಿಸಲು ಇರಬೇಕಾದ ಅರ್ಹತೆ ಹಾಗೂ ಸಲ್ಲಿಸಬೇಕಾದ ದಾಖಲೆಗಳು | ಪ್ರಥಮ ಬಿ.ಎಸ್ಸಿ.ಯಲ್ಲಿ ಶೇಕಡ 70 ಕ್ಕಿಂತ ಹೆಚ್ಚು ಅಂಕ ಪಡೆದು, ದ್ವಿತೀಯ ಬಿ.ಎಸ್ಸಿಗೆ ಪ್ರವೇಶ ಪಡೆದಿರಬೇಕು (ಎರಡು ಮೂಲ ವಿಜ್ಞಾನ ವಿಷಯಗಳ ಕಡ್ಡಾಯ)<br>**ಸಲ್ಲಿಸಬೇಕಾದ ದಾಖಲೆಗಳು**<br>• ಪ್ರಾಂಶುಪಾಲರಿಂದ ದೃಢೀಕರಿಸಿದ ಪ್ರಥಮ ಬಿ.ಎಸ್ಸಿ. ಅಂಕಪಟ್ಟಿ ಪ್ರತಿಗಳು (1st Semester & 2nd Semester)<br>• ಕಾಲೇಜಿನ ಗುರುತಿನ ಚೀಟಿ ಪ್ರತಿ<br>• IFSC ಕೋಡ್ ವಿವರವುಳ್ಳ ಬ್ಯಾಂಕ್ ಖಾತೆಯ ಪಾಸ್ ಬುಕ್ ಪ್ರತಿ ಅಥವಾ IFSC ಕೋಡ್ ವಿವರವುಳ್ಳ ರದ್ದುಗೊಳಿಸಿದ ಚೆಕ್ ಪ್ರತಿ<br>• ಆಧಾರ್ ಕಾರ್ಡ್ ಪ್ರತಿ |

| | |
|---|---|
| ತೃತೀಯ ವರ್ಷದ ಬಿ.ಎಸ್ಸಿ. ಶಿಷ್ಯವೇತನಕ್ಕೆ ಅರ್ಜಿ ಸಲ್ಲಿಸಲು ಇರಬೇಕಾದ ಅರ್ಹತೆ ಹಾಗೂ ಸಲ್ಲಿಸಬೇಕಾದ ದಾಖಲೆಗಳು | ದ್ವಿತೀಯ ಬಿ.ಎಸ್ಸಿ.ಯಲ್ಲಿ ಶೇಕಡ 70 ಕ್ಕಿಂತ ಹೆಚ್ಚು ಅಂಕ ಪಡೆದು, ತೃತೀಯ ಬಿ.ಎಸ್ಸಿಗೆ ಪ್ರ ಪಡೆದಿರಬೇಕು (ಎರಡು ಮೂಲ ವಿಜ್ಞಾನ ವಿಷಯಗಳ ಕಡ್ಡಾಯ)<br>**ಸಲ್ಲಿಸಬೇಕಾದ ದಾಖಲೆಗಳು**<br>• ಪ್ರಾಂಶುಪಾಲರಿಂದ ದೃಢೀಕರಿಸಿದ ದ್ವಿತೀಯ ಬಿ.ಎಸ್ಸಿ. ಅಂಕಪಟ್ಟಿ ಪ್ರತಿಗಳು (3rd Semester & 4th Semester)<br>• ಕಾಲೇಜಿನ ಗುರುತಿನ ಚೀಟಿ ಪ್ರತಿ<br>• IFSC ಕೋಡ್ ವಿವರವುಳ್ಳ ಬ್ಯಾಂಕ್ ಖಾತೆಯ ಪಾಸ್ ಬುಕ್ ಪ್ರತಿ ಅಥವಾ ಅಥವಾ I ಕೋಡ್ ವಿವರವುಳ್ಳ ರದ್ದು ಗೊಳಿಸಿದ ಚೆಕ್ ಪ್ರತಿ<br>• ಆಧಾರ್ ಕಾರ್ಡ್ ಪ್ರತಿ |

ಶಿಷ್ಯವೇತನಕ್ಕೆ ಅರ್ಜಿ ಸಲ್ಲಿಸುವ ಅರ್ಹ ವಿದ್ಯಾರ್ಥಿಗಳು ಅಕಾಡೆಮಿಯ ಅಂತರ್ಜಾಲದಲ್ಲಿರು **(www.kstacademy.org)** ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಂಡು ವಿವರಗಳನ್ನು ಭರ್ತಿಮಾಡಿ ಕಾಲೇಜಿನ ಪ್ರಾಂಶುಪಾಲರಿಗೆ ಸಲ್ಲಿಸಬೇಕು. ಕಾಲೇಜಿನ ಪ್ರಾಂಶುಪಾಲರು ಒಟ್ಟಾರೆ ಸಲ್ಲಿಕೆಯಾದ ಅರ್ಜಿಗಳನ್ನು ಕ್ರೋಢೀಕರಿಸಿ, ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ **(Microsoft Excel** ವಿದ್ಯಾರ್ಥಿಗಳ ವಿವರವನ್ನು ಭರ್ತಿ ಮಾಡಿ ಮೇಲ್ಕಂಡ ಅಗತ್ಯ ದಾಖಲೆಗಳೊಂದಿಗೆ (ದಾಖಲೆಗಳನ ಕಾಲೇಜಿನ ಪ್ರಾಂಶುಪಾಲರು ದೃಢೀಕರಿಸಿರಬೇಕು) ದಿನಾಂಕ : 28.09.2017 ರೊಳಗಾಗಿ ನೋಂದಾಯಿ ಅಂಚೆ ಮೂಲಕ ಮೇಲ್ಕಂಡ ಅಕಾಡೆಮಿಯ ವಿಳಾಸಕ್ಕೆ ಸಲ್ಲಿಸುವಂತೆ ಕೋರಲಾಗಿದೆ. ಅಪೂರ್ಣ ಭರ್ತಿ ಮಾಡಲಾದ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಹಾಗೂ ಅಂತಿಮ ದಿನಾಂಕದ ನಂತರ ಬರು ವಿದ್ಯಾರ್ಥಿಗಳ ಪಟ್ಟಿಯನ್ನು ಪರಿಗಣಿಸಲಾಗುವುದಿಲ್ಲ.

ಅಲ್ಲದೇ, ವಿದ್ಯಾರ್ಥಿಗಳ ವಿವರವುಳ್ಳ ನಮೂನೆಯನ್ನು **Email: fellowship9999@gmail.co** ಗೂ ಸಹ ಕಳುಹಿಸಿ ಕೊಡಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಶಿಷ್ಯವೇತನ ವಿಭಾಗ, ಕರ್ನಾಟಕ ವಿಜ್ಞಾ ಮತ್ತು ತಂತ್ರಜ್ಞಾನ ಅಕಾಡೆಮಿ (ದೂ. 080-26711160) ಇಲ್ಲಿ ಸಂಪರ್ಕಿಸಬಹುದಾಗಿದೆ.

ವಂದನೆಗಳೊಂದಿಗೆ.

ತಮ್ಮ ವಿಶ್ವಾಸಿ,

(ಮಹದೇವೇಗೌಡ)
ಆಡಳಿತಾಧಿಕಾರಿ, ಕವಿತಂಅ

ಗೆ,
ಪ್ರಾಂಶುಪಾಲರು
ಶ್ರೀ ಭಗವಾನ್ ಮಹವೀರ್ ಜೈನ್ ಪದವಿ ಕಾಲೇಜು
ರಾಬರ್ಟ್‌ಸನ್‌ಪೇಟ್, ಕೆ.ಜಿ.ಎಫ್ – 563122
ಬಂಗಾರಪೇಟೆ ತಾಲ್ಲೂಕು, ಕೋಲಾರ ಜಿಲ್ಲೆ

# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ

"ವಿಜ್ಞಾನ ಭವನ", ನಂ. 24/2 [illegible], 21ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು-560 070

ದೂರವಾಣಿ/ಫ್ಯಾಕ್ಸ್ 080-26711160 & 9686449039, ಇಮೇಲ್ : fellowship9999@gmail.com


ಕವಿತಂಅ/ಶಿಷ್ಯವೇತನ/07/2017-18 ದಿನಾಂಕ : 10.01.2018

ಮಾನ್ಯರೇ,

ವಿಷಯ : ಅಕಾಡೆಮಿ-ಎಸ್‌ಡಿಪಿ ಶಿಷ್ಯವೇತನಕ್ಕೆ ವಿದ್ಯಾರ್ಥಿಗಳು ಆಯ್ಕೆಯಾಗಿರುವ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2017-18ನೇ ಸಾಲಿನ ಅಕಾಡೆಮಿ-ಎಸ್‌ಡಿಪಿ ಶಿಷ್ಯವೇತನಕ್ಕೆ ತಮ್ಮ ಕಾಲೇಜಿನಿಂದ ಕಳುಹಿಸಲಾಗಿರುವ ಶಿಷ್ಯವೇತನದ ಅರ್ಜಿಗಳನ್ನು ಪರಿಶೀಲಿಸಲಾಗಿದ್ದು, ಈ ಕೆಳಕಂಡ ವಿದ್ಯಾರ್ಥಿಗಳು ಮಾತ್ರ ಅಕಾಡೆಮಿ-ಎಸ್‌ಡಿಪಿ ಶಿಷ್ಯವೇತನಕ್ಕೆ ಆಯ್ಕೆಯಾಗಿರುತ್ತಾರೆ :

| Sl. No. | Student Name | Subject | Year | Maximum Marks | Obtained Marks | Percentage |
|---|---|---|---|---|---|---|
| 1. | Asma V | PMCs | 1st Year | 600 | 523 | 87.17 |
| 2. | Sampreetha N | PMCs | | 1600 | 1373 | 85.81 |
| 3. | Meghana S | PMCs | | 1600 | 1323 | 82.69 |
| 4. | Ramya V | PMCs | 3rd Year | 1600 | 1317 | 82.31 |
| 5. | Abhiyal J S | PMCs | | 1600 | 1297 | 81.06 |
| 5. | Shalini R | PMCs | 2nd Year | 1600 | 1258 | 78.63 |

ಆಯ್ಕೆಯಾಗಿರುವ ವಿದ್ಯಾರ್ಥಿಗಳ ಬಗ್ಗೆ ಈ ಕೆಳಕಂಡ ಮಾಹಿತಿಯನ್ನು ಆದಷ್ಟು ಬೇಗ ಅಕಾಡೆಮಿಗೆ ಕಳುಹಿಸಿಕೊಡಲು ಕೋರಲಾಗಿದೆ.

- ಶಿಷ್ಯವೇತನಕ್ಕೆ ಆಯ್ಕೆಯಾಗಿರುವ ವಿದ್ಯಾರ್ಥಿಗಳು ತಮ್ಮ ಕಾಲೇಜಿನಲ್ಲೇ ವಿದ್ಯಾಭ್ಯಾಸವನ್ನು ಮುಂದುವರೆಸುತ್ತಿರುವ ಬಗ್ಗೆ ದೃಢೀಕರಣ ನೀಡುವುದು.
- ಶಿಷ್ಯವೇತನಕ್ಕೆ ಆಯ್ಕೆಯಾಗಿರುವ ವಿದ್ಯಾರ್ಥಿಗಳು ಯಾವುದೇ ಶಿಷ್ಯವೇತನ ಪಡೆಯುತ್ತಿಲ್ಲವೆಂಬ ಬಗ್ಗೆ ದೃಢೀಕರಣ ನೀಡುವುದು.

# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ

'ವಿಜ್ಞಾನ ಭವನ', ನಂ. 24/2 (ಬಿಡಿಎ ಕಾಂಪ್ಲೆಕ್ಸ್ ಹತ್ತಿರ), 21ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು-560 070

ದೂರವಾಣಿ/ಫ್ಯಾಕ್ಸ್ 080-26711160, ಇಮೇಲ್ : fellowship9999@gmail.com


ಕವಿತಂಅ/ಶಿ.ವೇ./ಎಸ್.ಡಿ.ಪಿ./07/2017-18 ದಿನಾಂಕ : 27.03.2018

ಮಾನ್ಯರೇ,

**ವಿಷಯ : 2017-18ನೇ ಸಾಲಿನ ಅಕಾಡೆಮಿ – ಎಸ್.ಡಿ.ಪಿ. ಶಿಷ್ಯವೇತನ ನೀಡಿರುವ ಬಗ್ಗೆ.**

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು ರಾಜ್ಯದ ಹಿಂದುಳಿದ ತಾಲ್ಲೂಕುಗಳ ವಿಜ್ಞಾನ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿಜ್ಞಾನ ಪದವಿ ವಿದ್ಯಾರ್ಥಿಗಳಿಗೆ **ವಿಶೇಷ ಅಭಿವೃದ್ಧಿ ಯೋಜನೆಯಡಿ ಅಕಾಡೆಮಿ – ಎಸ್.ಡಿ.ಪಿ. ಶಿಷ್ಯವೇತನವನ್ನು** ನೀಡಲಾಗುತ್ತಿದ್ದು, ತಮ್ಮ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಒಟ್ಟು 6 ವಿದ್ಯಾರ್ಥಿಗಳು 2017-18ನೇ ಸಾಲಿನ **ಅಕಾಡೆಮಿ-ಎಸ್.ಡಿ.ಪಿ ಶಿಷ್ಯವೇತನಕ್ಕೆ** ಆಯ್ಕೆಯಾಗಿರುತ್ತಾರೆ (ವಿದ್ಯಾರ್ಥಿಗಳ ಪಟ್ಟಿಯನ್ನು ಲಗತ್ತಿಸಲಾಗಿದೆ).

ಆಯ್ಕೆಯಾಗಿರುವ ಎಲ್ಲಾ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ NEFT ಮೂಲಕ ನೇರವಾಗಿ ತಲಾ ರೂ. 10,000/-ಗಳಂತೆ ಅಕಾಡೆಮಿ – ಎಸ್.ಡಿ.ಪಿ ಶಿಷ್ಯವೇತನವನ್ನು ಜಮಾ ಮಾಡಲಾಗಿದ್ದು, ಈ ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಎ. ಎಂ. ರಮೇಶ್)
ಹಿರಿಯ ವೈಜ್ಞಾನಿಕಾಧಿಕಾರಿ

ಇವರಿಗೆ,
ಪ್ರಾಂಶುಪಾಲರು
ಶ್ರೀ ಭಗವಾನ್ ಮಹಾವೀರ್ ಜೈನ್ ಪದವಿ ಕಾಲೇಜು
ರಾಬರ್ಟ್‌ಸನ್‌ಪೇಟ್, ಕೆ.ಜಿ.ಎಫ್ – 563122
ಬಂಗಾರಪೇಟೆ ತಾಲ್ಲೂಕು, ಕೋಲಾರ ಜಿಲ್ಲೆ